
# ನಿಮ್ಮೊಡನೆ

## ಸ್ಥಳೀಯರಿಗೆ ಉದ್ಯೋಗ ಪರಿಹಾರ ಸುಲಭವೇ?

ವಿವಿಧ ಕೈಗಾರಿಕೆಗಳ ಉದ್ಯೋಗ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ದೊರಕಿಸಿಕೊಡುವ ವಿಚಾರವು ನಮ್ಮ ಆಳುವ ವರ್ಗಕ್ಕೆ ಈಗ ಆಪ್ಯಾಯಮಾನ ಆಗತೊಡಗಿದೆ. ಈ ವಿಚಾರದಲ್ಲಿಯೂ ಅಧಿಕಾರಸ್ಥ ಪಕ್ಷಗಳಲ್ಲಿ ಭಿನ್ನ–ಭೇದ ಇಲ್ಲ. ಹಾಗೆ ನೋಡಿದರೆ, ಇದಕ್ಕೆ ದೇಶ–ಭಾಷೆಯ ಹಂಗೂ ಇದ್ದಂತಿಲ್ಲ.



ಈಶ್ವರ

ನಮ್ಮನ್ನು ಆಳುವ ವರ್ಗ, ರೈತರನ್ನು ಒಲಿಸಿಕೊಳ್ಳುವುದಕ್ಕಾಗಿ ಒಂದು ಸರಳ ಸೂತ್ರವನ್ನು ಶೋಧಿಸಿದೆ. ಅದರ ಹೆಸರು 'ಸಾಲ ಮನ್ನಾ'. ಈ ಕಾರ್ಯಕ್ರಮದ ಜಾರಿಸಾಧ್ಯತೆ, ಪ್ರಯೋಜನ ಹಾಗೂ ಪರಿಣಾಮಗಳ ವಿಚಾರದಲ್ಲಿ ನಮ್ಮ ರಾಜಕೀಯ ಪಕ್ಷಗಳಲ್ಲಿ ಭಿನ್ನ–ಭೇದ ಇಲ್ಲ. ಮತ ಗಳಿಕೆಯ ಘೋಷಣೆಯಾಗಿ ಇತ್ತೀಚಿನ ಹಲವು ಚುನಾವಣೆಗಳಲ್ಲಿ ಇದು ಬಳಕೆಯಾಗಿದೆ. ಇದರ ಕಿಮ್ಮತ್ತು ಚುನಾವಣೆಯಿಂದ ಚುನಾವಣೆಗೆ ಹೆಚ್ಚುತ್ತಲೇ ಇದೆ.

ಈ ಸಾಲಿಗೆ ಈಗ ಉದ್ಯೋಗದ ವಿಚಾರ ಕೂಡ ಸೇರಿದಂತಿದೆ. ವಿವಿಧ ಕೈಗಾರಿಕೆಗಳ ಉದ್ಯೋಗ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ದೊರಕಿಸಿಕೊಡುವ ವಿಚಾರವು ನಮ್ಮ ಆಳುವ ವರ್ಗಕ್ಕೆ ಈಗ ಆಪ್ಯಾಯಮಾನ ಆಗತೊಡಗಿದೆ. ಈ ವಿಚಾರದಲ್ಲಿಯೂ ಅಧಿಕಾರಸ್ಥ ಪಕ್ಷಗಳಲ್ಲಿ ಭಿನ್ನ–ಭೇದ ಇಲ್ಲ. ಹಾಗೆ ನೋಡಿದರೆ, ಇದಕ್ಕೆ ದೇಶ–ಭಾಷೆಯ ಹಂಗೂ ಇದ್ದಂತಿಲ್ಲ.

ಜಾಗತಿಕ ನೆಲೆಯಲ್ಲಿ ನೀತಿ–ನಿರ್ಧಾರಗಳ ಮೇಲೆ ಪ್ರಭಾವ ಬೀರುವಂತಹ ತಾಕತ್ತುಳ್ಳ ಅಮೆರಿಕದಿಂದ, ನಮ್ಮ ದೇಶದ ಮಧ್ಯಪ್ರದೇಶ, ಆಂಧ್ರಪ್ರದೇಶ, ಕರ್ನಾಟಕ, ತೆಲಂಗಾಣ ಮೊದಲುಗೊಂಡು ಬೇರೆ ಬೇರೆ ರಾಜ್ಯಗಳಲ್ಲಿ ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆಯ ವಿಚಾರ ಪದೇ ಪದೇ ಪ್ರಸ್ತಾಪ ಆಗುತ್ತಿದೆ. ಸ್ಥಳೀಯರಿಗೆ ಶೇಕಡ 75ರಷ್ಟು ಉದ್ಯೋಗ ನೀಡುವುದನ್ನು ಕಡ್ಡಾಯ ಮಾಡಿ ಕೆಲವು ರಾಜ್ಯಗಳು ಆದೇಶವನ್ನೂ ಹೊರಡಿಸಿವೆ. ಕರ್ನಾಟಕದ ಬೃಹತ್ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಅವರೂ ಉದ್ಯೋಗಗಳಲ್ಲಿ ಕರ್ನಾಟಕದವರಿಗೆ ಅದ್ಯತೆ ನೀಡಬೇಕು ಎಂದು ಉದ್ಯಮ ಸಂಸ್ಥೆಗಳಿಗೆ ಸೂಚಿಸಿದ್ದಾರೆ. ಹೊಸ ಕೈಗಾರಿಕಾ ನೀತಿಯಲ್ಲಿ ಈ ಸಂಬಂಧ ಷರತ್ತು ವಿಧಿಸುವ ಮಾತನ್ನೂ ಆಡಿದ್ದಾರೆ.

ಸ್ಥಳೀಯರಿಗೆ ಉದ್ಯೋಗ ಅವಕಾಶಗಳು ತೆರೆದುಕೊಳ್ಳಬೇಕು ಎಂದು ಅಲ್ಲಿನ ಸರ್ಕಾರವಾಗಲೀ, ಜನರಾಗಲೀ ಬಯಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಯುವ ಪೀಳಿಗೆಯ ಬದುಕಿನ ಪ್ರಶ್ನೆಯಾದ ಇಂತಹದೊಂದು ಗಂಭೀರ ವಿಚಾರವನ್ನು ಭಾವುಕ ನೆಲೆಯಲ್ಲಿ ಪರಿಭಾವಿಸಿ, ಚಿಟಿಕೆ ಹೊಡೆದಷ್ಟು ಸುಲಭ ಎಂಬಂತೆ ಪರಿಹಾರ ಪಡೆಯುವ ಮನಃಸ್ಥಿತಿ ಇದೆಯಲ್ಲ, ಅದರ ಬಗೆಗಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅಗತ್ಯ. ಹಾಗೆ ಉತ್ತರ ಕಂಡುಕೊಳ್ಳುವುದೇ ಉದ್ದೇಶಸಾಧನೆಗೆ ಇರುವ ಏಕೈಕ ರಾಜಮಾರ್ಗ.

ಉದ್ಯೋಗ ಅವಕಾಶಗಳು ಹಾಗೂ ಹೂಡಿಕೆ ಕಡಿಮೆ ಆಗುತ್ತಿರುವ ಕಾಲಘಟ್ಟದಲ್ಲಿ ಇಂತಹದೊಂದು ಉಪಕ್ರಮಕ್ಕೆ ನಮ್ಮ ರಾಜ್ಯ ಸರ್ಕಾರಗಳು ಮುಂದಾಗುತ್ತಿವೆ. ಇದಕ್ಕೆ ಕಾರಣ ಆಗಿರಬಹುದಾದ ಅಂಶಗಳು ಏನಿರಬಹುದು? ಇದು, ಆಳುವ ವರ್ಗದಲ್ಲಿ ಜನಪ್ರಿಯ ಘೋಷಣೆಯಾಗಿ ಬಳಕೆಯಾಗುತ್ತಿದೆಯೇ ಅಥವಾ ಅಂತಹದೊಂದು ಸನ್ನಿವೇಶ ಸೃಷ್ಟಿಯಾಗಿದೆಯೇ ಎಂಬುದು ಮೊದಲು ಚರ್ಚೆಗೆ ಒಳಪಡಬೇಕು. ವಿವಿಧ ಸ್ವರೂಪದ ಉದ್ಯಮಗಳಲ್ಲಿ ಸ್ಥಳೀಯರ ಪ್ರಾತಿನಿಧ್ಯದ ಬಗ್ಗೆ ನಿಖರ ಅಂಕಿಅಂಶ ಸಂಗ್ರಹಿಸಬೇಕು. 'ಸಿ', 'ಡಿ' ದರ್ಜೆ ಒಳಗೊಂಡಂತೆ ವಿವಿಧ ವರ್ಗಗಳಲ್ಲಿ ಸ್ಥಳೀಯರಿಗೆ ಉದ್ದೇಶಪೂರ್ವಕವಾಗಿ ಅವಕಾಶ ನಿರಾಕರಿಸಿದ ನಿದರ್ಶನಗಳಿವೆಯೇ? ಹೊರಗಿನವರಿಗೆ ಹೆಚ್ಚಿನ ಪ್ರಮಾಣದಲ್ಲಿ ಅವಕಾಶ ದೊರಕಿದ್ದರೆ ಅದಕ್ಕೆ ಕಾರಣ ಏನು? ಅದರಲ್ಲಿ ಕೌಶಲದ ಪಾತ್ರ ಏನು? ಕೌಶಲದ ಕೊರತೆ ಇದ್ದರೆ ಅದನ್ನು ತುಂಬುವ ಬಗೆ ಹೇಗೆ... ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡ ಬಳಿಕ, ಪರಿಹಾರೋಪಾಯ ಶೋಧಿಸಿದರೆ, ಅದರ ಆಧಾರದ ಮೇಲೆ ಕ್ರಮ ಜರುಗಿಸಿದರೆ ಅದಕ್ಕೆ ಹೆಚ್ಚಿನ ಅರ್ಥ ಬರುತ್ತದೆ.

ಕರ್ನಾಟಕದ ಹೋಟೆಲ್ ಉದ್ಯಮವು ನೌಕರರ ತೀವ್ರ ಕೊರತೆ ಎದುರಿಸುತ್ತಿದೆ. ಅದರಲ್ಲಿ ಈಶಾನ್ಯ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ತುಂಬಿಕೊಳ್ಳುತ್ತಿದ್ದಾರೆ ಎಂಬ ಮಾತಿದೆ. ನಮ್ಮವರು ಆ ನೌಕರಿ ಕಡೆ ಒಲವು ತೋರಿಸುತ್ತಿಲ್ಲ ಎಂಬ ಕಾರಣಕ್ಕೆ ಹೊರ ರಾಜ್ಯದವರನ್ನು ಅವಲಂಬಿಸಬೇಕಿದೆ. ಕಟ್ಟಡ ನಿರ್ಮಾಣ ಕ್ಷೇತ್ರ ಒಳಗೊಂಡಂತೆ ಪ್ರತೀ ಕ್ಷೇತ್ರದಲ್ಲಿನ ಕೆಲಸಗಾರರ ಬೇಡಿಕೆ, ಪೂರೈಕೆಯ ಅಂಕಿ–ಅಂಶ ಮುಂದಿರಿಸಿಕೊಂಡು, ಅದರ ಬೆಳಕಲ್ಲಿ ಪರಿಹಾರಸೂತ್ರ ಹುಡುಕುವಂತಾಗಬೇಕು.

ಅಧಿಕಾರದ ಚುಕ್ಕಾಣಿ ಹಿಡಿಯುತ್ತಲೇ ದಿಢೀರನೆ ಘೋಷಣೆ ಹೊರಡಿಸುವುದರಿಂದ ಪ್ರಯೋಜನಕ್ಕಿಂತ ಹಾನಿಯೇ ಹೆಚ್ಚಾಗಬಹುದು. ಸ್ಥಳೀಯರಿಗೆ ಆದ್ಯತೆ, ಅವರನ್ನು ಇಂತಿಷ್ಟು ಪ್ರಮಾಣದಲ್ಲಿ ನೇಮಿಸಿಕೊಳ್ಳುವುದು ಕಡ್ಡಾಯ ಎಂಬ ವೀರಾವೇಶದ ಮಾತು, ಉದ್ಯಮ ವಲಯಕ್ಕೆ ಬೇರೆ ಬಗೆಯ ಸಂದೇಶ ರವಾನಿಸಬಹುದು. ಇದು, ಬಹಳ ಜಟಿಲವಾದ ವಿಷಯ. ತಪ್ಪು ಸಂದೇಶ ರವಾನೆಯಾಗದ ರೀತಿಯಲ್ಲಿ ನಾಜೂಕಿನಿಂದ ನಿಭಾಯಿಸಬೇಕು. ಹೂಡಿಕೆಗೆ ಮತ್ತು ಉದ್ಯೋಗ ಅವಕಾಶಗಳ ಸೃಷ್ಟಿಗೆ ಬಾಧಕ ಉಂಟಾಗಬಾರದು. ಅಂತೆಯೇ ಸ್ಥಳೀಯರ ಹಿತರಕ್ಷಣೆಯೂ ಆಗಬೇಕು. ಈ ರೀತಿಯ ಜಾಣ್ಮೆಯ ನಡೆ ಈಗಿನ ಸಂದರ್ಭದಲ್ಲಿ ಅಪೇಕ್ಷಣೀಯ.

■ ಎನ್. ಉದಯಕುಮಾರ್